## ಇತಿಹಾಸ

## ಅಧ್ಯಾಯ –1

# ಭಾರತಕ್ಕೆ ಯುರೋಪಿಯನ್ನರ ಆಗಮನ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತವು ಯುರೋಪಿಯನ್ನರೊಂದಿಗೆ ಹೊಂದಿದ್ದ ವ್ಯಾಪಾರ.
- ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರು.
- ಮೊದಲನೆಯ, ಎರಡನೆಯ, ಮೂರನೆಯ ಕರ್ನಾಟಿಕ್ ಯುದ್ಧಗಳು.
- ಪ್ಲಾಸಿಕದನ, ದ್ವಿ-ಸರ್ಕಾರ ಪದ್ಧತಿ.
- ಬ್ರಿಟಿಷರ ಆಕ್ರಮಣ ನೀತಿ.

ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಯುರೋಪಿನ ಮಧ್ಯವಾಣಿಜ್ಯ ಸಂಬಂಧಗಳು ಬೆಸೆದು ಕೊಂಡಿದ್ದವು. ಪ್ರಮುಖವಾಗಿ ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಇತ್ಯಾದಿ ವಸ್ತುಗಳಿಗೆ ಯುರೋಪಿನ ಜನರಿಂದ ಯಥೇಚ್ಛ ಬೇಡಿಕೆಯಿತ್ತು. ಈ ವಸ್ತುಗಳನ್ನು ಯುರೋಪಿನ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿತ್ತು. ಮಧ್ಯಕಾಲದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಪರ್ಷಿಯನ್ ಕೊಲ್ಲಿ, ಕೆಂಪುಸಮುದ್ರ ಮತ್ತು ಭಾರತದ ವಾಯುವ್ಯ ಪ್ರದೇಶಗಳ ಮೂಲಕ ನಡೆಯುತ್ತಿದ್ದವು. ಅರಬ್ಬರು ಏಷ್ಯಾದ ವ್ಯಾಪಾರವನ್ನು ನಡೆಸುತ್ತಿದ್ದರು. ಮೆಡಿಟರೇನಿಯನ್ ಹಾಗೂ ಯುರೋಪಿನ ವ್ಯಾಪಾರವು ಇಟಲಿಯ ಏಕಸ್ವಾಮ್ಯತೆಗೆ ಒಳಪಟ್ಟಿತ್ತು. 1400ರ ಹೊತ್ತಿಗೆ ಈ ವ್ಯಾಪಾರವು ಅತ್ಯಂತ ಲಾಭದಾಯಕವಾಗಿತ್ತು. ಇಟಲಿಯು ತನ್ನ ಸಂಪದ್ಭರಿತ ನಗರಗಳಾದ ವೆನಿಸ್, ಜಿನೋವಾ, ಮಿಲಾನ್, ಫ್ಲಾರೆನ್ಸ್ ಮೂಲಕ ಭಾರತದ ಸಾಂಬಾರ ಪದಾರ್ಥಗಳ ವಿತರಣೆ ಮಾಡುವ ಕೇಂದ್ರವಾಯಿತು. ಇಟಲಿಯ ಏಕಸ್ವಾಮ್ಯವನ್ನು ಮುರಿಯಲು ಪಶ್ಚಿಮ ಯುರೋಪಿನ ದೇಶಗಳು ಅಟ್ಲಾಂಟಿಕ್ ಸಾಗರದ ಮೂಲಕ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಪ್ರಯತ್ನದಲ್ಲಿದ್ದವು. ಸ್ಪೇನ್ ಮತ್ತು ಪೋರ್ಚುಗಲ್ ಮೊದಲುಗೊಂಡು ಯುರೋಪಿನ ಇತರ ದೇಶಗಳು ಹೊಸ ಭೂ ಪ್ರದೇಶಗಳನ್ನು ಹುಡುಕುವ ನಾವಿಕರ ಸಾಹಸಕ್ಕೆ ಪ್ರೋತ್ಸಾಹ ನೀಡಿದವು.

ಸಮುದ್ರಯಾನಕ್ಕೆ ಹೊಸ ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟ, ಇತ್ಯಾದಿಗಳು ನಾವಿಕರಿಗೆ ಸಹಾಯಕವಾದವು. ಇದರ ಜೊತೆಗೆ ಪೂರ್ವದೇಶಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು, ಧರ್ಮಪ್ರಚಾರಕ್ಕಾಗಿ ಉತ್ಸುಕರಾಗಿದ್ದ ಮಿಷನರಿಗಳು ಸಹ ಭಾರತಕ್ಕೆ ಪರ್ಯಾಯ ಮಾರ್ಗವನ್ನು ಹುಡುಕಲು ಪ್ರೇರಣೆಯನ್ನು ನೀಡಿದವು.

ಭಾರತದಲ್ಲಿ ಮೊಘಲ್ ರಾಜಮನೆತನವು ಸ್ಥಾಪನೆಯಾಗುವ ಮೊದಲೇ ಯುರೋಪಿಯನ್ನರು ಪೂರ್ವದ ಕಡೆಗೆ ಸಮುದ್ರಯಾನಮಾಡಲು ಆರಂಭಿಸಿದರು. ಭಾರತದ ಸಂಪತ್ತಿನ ಬಗ್ಗೆ ಇದ್ದ ರೋಚಕ ವಿಷಯಗಳಿಂದ ಅವರು ಆಕರ್ಷಿತರಾಗಿದ್ದರು. ಪೋರ್ಚುಗೀಸ್ ನಾವಿಕ ವಾಸ್ಕೊಡಗಾಮನು 1498ರಲ್ಲಿ

KTBS Not to be republished

ಭಾರತದ ಪಶ್ಚಿಮ ತೀರದ ಕಲ್ಲಿಕೋಟೆಗೆ ಮೊಟ್ಟಮೊದಲ ಬಾರಿ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದನು. ಈ ಮೂಲಕ ಭಾರತದೊಂದಿಗೆ ಮರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ಮೊದಲಿಗನಾದನು.

**ನಿಮಗಿದು ತಿಳಿದಿರಲಿ :**

*ಬಹುಕಾಲದಿಂದಲೂ ಯುರೋಪಿಯನ್ನರು ಮತ್ತು ಅರಬ್ಬರು ಏಷ್ಯಾ ಭೂ ಮಾರ್ಗದ ಮೂಲಕ ಭಾರತದೊಂದಿಗೆ ವ್ಯಾಪಾರವನ್ನು ಹೊಂದಿದ್ದರು. ಕಾನ್‌ಸ್ಟ್ಯಾಂಟಿನೋಪಲ್‌ನಿಂದ ಏಷ್ಯಾದ ಮೂಲಕವಾಗಿ ಪ್ರಯಾಣಮಾಡಿ ಅವರು ಭಾರತಕ್ಕೆ ಬರುತ್ತಿದ್ದರು. ಆಗ, ಭಾರತಕ್ಕೆ ಇದ್ದ ಮಾರ್ಗ ಇದೊಂದೇ ಆಗಿತ್ತು. ಆದರೆ, 1453ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟ್ಯಾಂಟಿನೋಪಲನ್ನು ವಶಪಡಿಸಿಕೊಂಡ ನಂತರ ಈ ವ್ಯಾಪಾರ ವಹಿವಾಟಿಗೆ ಧಕ್ಕೆಯುಂಟಾಯಿತು. ಇದು ಯುರೋಪಿಯನ್ನರು ಭಾರತಕ್ಕೆ ಪರ್ಯಾಯ ಮಾರ್ಗವನ್ನು ಹುಡುಕಲು ಬಹಳ ಮುಖ್ಯವಾದ ಪ್ರೇರಣೆಯಾಯಿತು.*

**ನಿಮಗಿದು ತಿಳಿದಿರಲಿ :**

**ಏಕಸ್ವಾಮ್ಯ:** *ವ್ಯಾಪಾರದಲ್ಲಿ ಕೊಳ್ಳುವ ಮತ್ತು ಮಾರಾಟಮಾಡುವ ಹಕ್ಕನ್ನು ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಹೊಂದಿರುವುದನ್ನು ಏಕಸ್ವಾಮ್ಯತೆ ಎನ್ನಬಹುದಾಗಿದೆ.*

ಅರೇಬಿಯನ್ ಸಮುದ್ರದ ಮೇಲೆ ಪೋರ್ಚುಗೀಸರು ವ್ಯಾಪಾರಿ ಏಕಸ್ವಾಮ್ಯತೆಯನ್ನು 17ನೆಯ ಶತಮಾನದವರೆಗೂ ಹೊಂದಿದ್ದರು. ಭಾರತದೊಳಗೆ ಡಚ್ ಮತ್ತು ಇಂಗ್ಲಿಷರ ಪ್ರವೇಶದೊಂದಿಗೆ ಪೋರ್ಚುಗೀಸರ ಏಕಸ್ವಾಮ್ಯತೆಯು ಶಿಥಿಲಗೊಂಡಿತು.

ಸ್ಥಳೀಯ ದೊರೆಗಳು ಹಾಗೂ ಮೊಘಲ್ ಚಕ್ರವರ್ತಿಯಿಂದ ಬ್ರಿಟಿಷರು ವ್ಯಾಪಾರ ಅನುಮತಿಯನ್ನು ಕೇಳಿ ಪಡೆದರು. ಮೊದಮೊದಲು ವ್ಯಾಪಾರವು ಯುರೋಪಿಯನ್ನರು ಮತ್ತು ಭಾರತೀಯರ ಪರಸ್ಪರ ಅನುಕೂಲಕ್ಕಾಗಿತ್ತು. ಈ ಪ್ರಾರಂಭದ ದಿನಗಳಲ್ಲಿ ಬ್ರಿಟಿಷರು ಇತರೆ ಯುರೋಪಿಯನ್ನರೊಂದಿಗೆ ವ್ಯಾಪಾರದ ಏಕಸ್ವಾಮ್ಯತೆಗಾಗಿ ಹೊಡೆದಾಡಿದರು. 17ನೆಯ ಶತಮಾನದ ಪೂರ್ವಾರ್ಧದಲ್ಲಿ ಬ್ರಿಟಿಷರು ಈ ಬಗೆಯ ಹೋರಾಟದಲ್ಲಿ ಪೋರ್ಚುಗೀಸರನ್ನು ಸೋಲಿಸಿದರು. 18ನೆಯ ಶತಮಾನದ ಕೊನೆಯಲ್ಲಿ ಡಚ್ಚರ ವಿರುದ್ಧವೂ ಸಹ ಇವರು ಜಯಗಳಿಸಿದರು.

ಮೊಘಲ್ ಚಕ್ರವರ್ತಿಯಾದ ಫರೂಕ್ ಸಿಯಾರನು 17ನೆಯ ಶತಮಾನದ ಆರಂಭದಲ್ಲಿ ಕಲ್ಕತ್ತಾ ಸಮೀಪದ ಕೆಲವು ಹಳ್ಳಿಗಳನ್ನು ಬ್ರಿಟಿಷರಿಗೆ ದತ್ತಿಯಾಗಿ ನೀಡಿದನು. ಕ್ರಮೇಣವಾಗಿ ಮದ್ರಾಸ್ ಮತ್ತು ಮುಂಬೈಯಲ್ಲಿಯೂ ಬ್ರಿಟಿಷರು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡರು. ಮದ್ರಾಸ್, ಕಲ್ಕತ್ತಾ ಮತ್ತು ಮುಂಬೈಯಲ್ಲಿನ ಮೂಲ ಮೀನುಗಾರರ ಹಳ್ಳಿಗಳೇ, ನಂತರದಲ್ಲಿ ಬ್ರಿಟಿಷರ ಆಡಳಿತ ಕೇಂದ್ರಗಳು ಅಥವಾ ಪ್ರೆಸಿಡೆನ್ಸಿಗಳಾದವು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ತಮ್ಮ ವ್ಯಾಪಾರ, ವಾಣಿಜ್ಯ ಮತ್ತು ರಾಜಕಾರಣವನ್ನು ವಿಸ್ತರಿಸಿಕೊಂಡರು. ಪ್ರಾರಂಭದಲ್ಲಿ ಈ ಸ್ಥಳಗಳು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರ ಕೇಂದ್ರ (ಕೋಠಿ)ಗಳಾಗಿದ್ದವು. ಅವುಗಳ ಸುತ್ತ ಇವರು ಕೋಟೆಗಳನ್ನು ಕಟ್ಟಿ ಭದ್ರಪಡಿಸಿಕೊಂಡರು. ಅವು ಇವರ ಸರಕು ಸಂಗ್ರಹಣ ಕೇಂದ್ರಗಳೂ ಆಗಿದ್ದವು. ಈ ಪ್ರದೇಶಗಳು ತಮ್ಮದೇ ನಾಗರಿಕ ಮತ್ತು ಅಪರಾಧ ನಿಯಮಗಳಿಗೆ ಒಳಪಟ್ಟಿದ್ದವು.

ಮೊಘಲ್ ಸಾಮ್ರಾಜ್ಯದ ಪಾಲಿಗೆ 18ನೆಯ ಶತಮಾನದ ಮೊದಲಾರ್ಧವು ಮಹಾಪತನದ ಕಾಲವಾಗಿತ್ತು. ಅನೇಕ ದೇಶೀಯ ಸಂಸ್ಥಾನಗಳು ಹಾಗೂ ಪಾಳೇಯಪಟ್ಟುಗಳ ಉದಯದಿಂದಾಗಿ

KTBS Not to be republished




KTBS
Not to be republished

ಮೊಘಲ್ ಸಂಸ್ಥಾನವು ನಿಧಾನವಾಗಿ ನಶಿಸಿತು. ಅವುಗಳಲ್ಲಿ ಬಹುಮುಖ್ಯವಾದವು ಬಂಗಾಳ, ಔದ್, ಹೈದರಾಬಾದ್ ಮತ್ತು ಮರಾಠ ಸಂಸ್ಥಾನಗಳು. ಈ ರಾಜ್ಯಗಳು ನೆಪಮಾತ್ರಕ್ಕೆ ಮೊಘಲ್ ಚಕ್ರವರ್ತಿಯ ಪರಮಾಧಿಕಾರವನ್ನು ಒಪ್ಪಿದ್ದವು.

ಈ ಸಮಯದಲ್ಲಿ ಬ್ರಿಟಿಷ್ ಕಂಪನಿಯು ತನ್ನ ವ್ಯಾಪಾರವನ್ನು ಸಂರಕ್ಷಿಸಲು ತನ್ನದೇ ಆದ ಸೈನ್ಯವನ್ನು ಕಟ್ಟಿಕೊಂಡಿತ್ತು. ದೆಹಲಿಯಿಂದ ಪ್ರತ್ಯೇಕವಾಗುತ್ತ ತಮ್ಮ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ ಭಾರತದ ಚಿಕ್ಕಪುಟ್ಟ ಅರಸರು ಈ ವಿದೇಶಿ ಸೈನ್ಯದ ಬೆಂಬಲವನ್ನು ಪಡೆಯಲು ಮುಂದಾದರು. ಮುಂದಿನ ದಿನಗಳಲ್ಲಿ ಬ್ರಿಟಿಷರು ಮತ್ತು ಫ್ರೆಂಚರು ಭಾರತದ ಮೇಲೆ ಅಧಿಪತ್ಯ ಸ್ಥಾಪಿಸಲು ದೇಶೀಯ ಸಂಸ್ಥಾನಗಳ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದರು.

ಬ್ರಿಟಿಷ್ ವ್ಯಾಪಾರಿಗಳು ಸಾಮ್ರಾಜ್ಯದೊಡೆಯರಾದದ್ದು ಕೇವಲ ಸೈನ್ಯ ಬಲದಿಂದಲ್ಲ. ಬದಲಿಗೆ ರಾಜಕೀಯ ಮುತ್ಸದ್ಧಿತನ ಮತ್ತು ಕುಟಿಲತೆಯನ್ನು ಉಪಯೋಗಿಸಿದರು. ಇಂತಹ ಸಂದರ್ಭದಲ್ಲಿ ದೇಶೀಯ ರಾಜಪ್ರಭುತ್ವಗಳು ಅವನತಿ ದಿನಗಳಲ್ಲಿಯೂ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯನ್ನು ವಿರೋಧಿಸಿದ ಸಂದರ್ಭಗಳು ಕಡಿಮೆಯೇನಿರಲಿಲ್ಲ. ಬಂಗಾಳದ ನವಾಬ ಸಿರಾಜುದ್ದೌಲನಿಂದ ಮೊದಲಾಗಿ, ಮೈಸೂರಿನ ಹೈದರ್, ಟಿಪ್ಪು ಸಹಿತ ಅನೇಕರು ಬ್ರಿಟಿಷರ ವಿರುದ್ಧ ಹೋರಾಡಿದರು.

ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ಅನ್ವರುದ್ದೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡರು. ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದದ ಮೂಲಕ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು. ಇದನ್ನು ಮೊದಲನೆ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ.

ದಖನ್‌ನಲ್ಲಿ ಹೈದರಾಬಾದಿನ ನಿಜಾಮ ಪದವಿಗೆ ಹಾಗೂ ಕರ್ನಾಟಿಕ್‌ದ ನವಾಬ ಪದವಿಗಾಗಿ ಪೈಪೋಟಿ ಏರ್ಪಟ್ಟಿತ್ತು. ಉತ್ತರಾಧಿಕಾರದ ಈ ಪೈಪೋಟಿಯಲ್ಲಿ ಇಂಗ್ಲಿಷರು ಹಾಗೂ ಫ್ರೆಂಚರು ತಮ್ಮ ತಮ್ಮ ಅಭ್ಯರ್ಥಿಗಳಿಗೆ ಬೆಂಬಲವನ್ನಿತ್ತರು. ಬ್ರಿಟಿಷರು ರಾಬರ್ಟ್‌ಕ್ಲೈವ್‌ನ ನೇತೃತ್ವದಲ್ಲಿ ಅನ್ವರುದ್ದೀನನಿಗೆ ಬೆಂಬಲವನ್ನು ನೀಡಿದರು. ಹಾಗೆಯೇ ಫ್ರೆಂಚರು ಡೂಪ್ಲೆ ನೇತೃತ್ವದಲ್ಲಿ ಚಂದಾಸಾಹೇಬನಿಗೆ ಬೆಂಬಲ

**ನಿಮಗಿದು ತಿಳಿದಿರಲಿ :**

***ರಾಬರ್ಟ್‌ಕ್ಲೈವ್ :*** *ಬ್ರಿಟಿಷ್‌ಭಾರತದ ಸೃಷ್ಟಿಗೆ ಕಾರಣವಾದಂತಹ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರುಕೂನನಾಗಿ ಸೇವೆಗೆ ಸೇರಿದ್ದನು. ಕರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು. ದಕ್ಷಿಣದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು. 1757ರ ಪ್ಲಾಸಿಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು. ಅಪಾರ ಸಂಪತ್ತಿನಿಂದ ಇಂಗ್ಲೆಂಡಿಗೆ ಹಿಂದಿರುಗಿದ ಕ್ಲೈವನು ಸಂಸತ್ತಿನ ಸದಸ್ಯನಾಗಿ ಸಹ ನೇಮಕಗೊಂಡಿದ್ದನು. ರಾಬರ್ಟ್ ಕ್ಲೈವನು ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಈಸ್ಟ್ ಇಂಡಿಯಾ ಕಂಪನಿಯು ನಷ್ಟವನ್ನು ಅನುಭವಿಸತೊಡಗಿತು. ಅವನ ಮೇಲೆ ಆಪಾದನೆಗಳು ಇದ್ದಾಗ್ಯೂ ಸಹ ಅನಿವಾರ್ಯತೆಯಲ್ಲಿ ಸರ್ಕಾರವು ಮತ್ತೆ ಕ್ಲೈವ್‌ನನ್ನು ಬ್ರಿಟಿಷರ ಘನತೆಯನ್ನು ಉಳಿಸುವ ಸಲುವಾಗಿ ಭಾರತಕ್ಕೆ ಸೇನಾಪತಿಯಾಗಿ ಕಳುಹಿಸಿಕೊಟ್ಟಿತು. ಬಕ್ಸಾರ್ ಕದನದಲ್ಲಿ ಮತ್ತೆ ವಿಜಯಿಯಾಗಿ ಬ್ರಿಟಿಷರಿಗೆ ಘನತೆಯನ್ನು ತಂದುಕೊಟ್ಟ ಕ್ಲೈವನು ಬಂಗಾಳ, ಬಿಹಾರ, ಒರಿಸ್ಸಾದ ದಿವಾನಿ ಹಕ್ಕನ್ನು ಸಹ ತಂದುಕೊಟ್ಟನು. ಇದರಿಂದ ಮತ್ತೆ ಸಂಪತ್ತನ್ನು ತನಗೂ ಮತ್ತು ಈಸ್ಟ್ ಇಂಡಿಯಾ ಕಂಪನಿಗೆ ದೊರಕಿಸಿಕೊಟ್ಟು 1767ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು.*

***ಡೂಪ್ಲೆ :*** *ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗೌರ್ನರ್ ಜನರಲ್ ಆಗಿ 1742ರಲ್ಲಿ ನೇಮಕಗೊಂಡನು. ಭಾರತದ ಮೇಲೆ ಅಧಿಪತ್ಯ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ಡೂಪ್ಲೆ ಇಲ್ಲಿನ ದೇಶೀಯರಾಜರುಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡಿದ್ದನು. ಡೂಪ್ಲೆ ಕಟ್ಟಿದ ದೇಶೀ ಸೇನೆಯಿಂದಲೇ ಹೈದರಾಲಿಯು ಸಹ ತರಬೇತಿ ಪಡೆದಿದ್ದನು. ಡೂಪ್ಲೆಯು ಬ್ರಿಟಿಷರ ಅಧಿಪತ್ಯ ಸ್ಥಾಪನೆಗೆ ಸವಾಲಾಗಿ ಕಂಡಿದ್ದನು. ಕರ್ನಾಟಿಕ್ ಮತ್ತು ದಖನ್ ಮೇಲಿನ ಅಧಿಪತ್ಯ ಸ್ಥಾಪನೆಗಾಗಿ ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ಸಂಘರ್ಷವನ್ನು ಕಾಣುತ್ತೇವೆ. ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ಬ್ರಿಟಿಷರ ನಡುವಿನ ಸಂಘರ್ಷವು 1754ರವರೆಗೆ ನಡೆಯಿತು. ತದನಂತರದಲ್ಲಿ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.*

ನೀಡಿದರು. ಮುಂದೆ ಜರುಗಿದ ಯುದ್ಧಗಳಲ್ಲಿ ರಾಬರ್ಟ್‌ಕ್ಲೈವನು ಆರ್ಕಾಟಿನ ಮೇಲೆ ದಾಳಿ ನಡೆಸಿ ತಿರುಚಿನಾಪಳ್ಳಿಯನ್ನು ಸುತ್ತುವರೆದನು. ಫ್ರೆಂಚರ ಬೆಂಬಲಿಗನಾಗಿದ್ದ ಚಂದಾಸಾಹೇಬನು ಯುದ್ಧದಲ್ಲಿ ಹತನಾದನು. ಇದರಿಂದ ಕರ್ನಾಟಿಕ್ ಪ್ರದೇಶವು ಪರೋಕ್ಷವಾಗಿ ಬ್ರಿಟಿಷರ ವಶವಾಯಿತು. ಹೈದರಾಬಾದಿನಲ್ಲಿ ಬ್ರಿಟಿಷರ ಬೆಂಬಲಿಗನಾಗಿದ್ದ ನಾಸಿರ್‌ಜಂಗನನ್ನು ಫ್ರೆಂಚರು ಯುದ್ಧದಲ್ಲಿ ಸೋಲಿಸಿದರು. ಇದರ ಪರಿಣಾಮವಾಗಿ ಹೈದರಾಬಾದ್ ಫ್ರೆಂಚರ ಕೈವಶವಾಯಿತು. ಇದನ್ನು ಎರಡನೇ ಕರ್ನಾಟಿಕ್ ಯುದ್ಧವೆಂದು ಕರೆಯುತ್ತಾರೆ. ಆದರೆ ದಖನ್ ಮೇಲಿನ ಫ್ರೆಂಚರ ಪ್ರಭಾವವು ಕಡಿಮೆಯಾಯಿತು.

ಮುಂದೆ ಫ್ರೆಂಚರು ಮದ್ರಾಸಿನ ಸೇಂಟ್ ಜಾರ್ಜ್ ಕೋಟೆಯನ್ನು ವಶಪಡಿಸಿಕೊಂಡು ಮದ್ರಾಸಿನ ಮೇಲೆ ದಾಳಿಮಾಡಲು ಹವಣಿಸಿ ವಿಫಲರಾದರು. ಬ್ರಿಟಿಷರ ಸೇನಾ ಮುಖಂಡನಾಗಿದ್ದ ಸರ್‌ಐರ್‌ಕೂಟನು ಫ್ರೆಂಚರನ್ನು ವಾಂಡಿವಾಷ್‌ನ ಕದನದಲ್ಲಿ ಪರಾಜಯಗೊಳಿಸಿದನು. ಇದರಿಂದಾಗಿ ಫ್ರೆಂಚರು ಭಾರತದಲ್ಲಿ ಬಹುತೇಕವಾಗಿ ತಮ್ಮ ಎಲ್ಲ ಅಧಿಕಾರವನ್ನು ಕಳೆದುಕೊಂಡರು. ಮುಂದೆ ಆದ ಒಪ್ಪಂದದಲ್ಲಿ ಫ್ರೆಂಚರಿಗೆ ಬ್ರಿಟಿಷರು ತಮ್ಮೆಲ್ಲ ಬಳುವಳಿಗಳನ್ನು ಹಿಂದಿರುಗಿಸಿದರು. ಆದಾಗ್ಯೂ ಇನ್ನು ಮುಂದೆ ಫ್ರೆಂಚರು ಕೋಟೆಗಳನ್ನು ಕಟ್ಟಿ ರಕ್ಷಿಸಿಕೊಳ್ಳುವಂತಿರಲಿಲ್ಲ. ಅವು ಕೇವಲ ವ್ಯಾಪಾರಿ ಕೇಂದ್ರವಾಗಿಯಷ್ಟೆ ಕಾರ್ಯನಿರ್ವಹಿಸಬೇಕಿತ್ತು. ಇದು ಮೂರನೆ ಕರ್ನಾಟಿಕ್ ಕದನದ ಮುಖ್ಯವಾದ ಪರಿಣಾಮವಾಗಿದೆ.

> **ನಿಮಗಿದು ತಿಳಿದಿರಲಿ :**
>
> **ಕಪ್ಪು ಕೋಣೆ ದುರಂತ (Black hole tragedy)**
>
> *ಬಂಗಾಳದ ನವಾಬನಾದ ಸಿರಾಜುದ್ದೌಲನು 1756ರಲ್ಲಿ ಇಂಗ್ಲೆಂಡಿನ ವ್ಯಾಪಾರಿ ಕೇಂದ್ರವಾಗಿದ್ದ ಕಾಸಿಂಬಜಾರ್‌ನ ಮೇಲೆ ದಾಳಿಮಾಡಿ ಕಲ್ಕತ್ತಾದ ಸಂತ ಡೇವಿಡ್ ಕೋಟೆಯನ್ನು ವಶಪಡಿಸಿಕೊಂಡಿದ್ದನು. ಈ ದಾಳಿಯ ಸಮಯದಲ್ಲಿ ಸೆರೆಹಿಡಿದ ಬ್ರಿಟಿಷ್ ಸೈನಿಕರನ್ನು ಕಲ್ಕತ್ತಾದ ಒಂದು ಕಿರಿದಾದ ಕೋಣೆಯಲ್ಲಿ ಶಿಕ್ಷೆಗಾಗಿ ಕೂಡಿಟ್ಟನು. ಉರಿ ಬೇಸಿಗೆಯ ಬಿಸಿಲಿನಿಂದ ಅದರಲ್ಲಿ ಸೆರೆಯಾಗಿದ್ದ 146 ಸೈನಿಕ ಕೈದಿಗಳಲ್ಲಿ 123 ಜನರು ಮರಣ ಹೊಂದಿದರು. ಇದು ಕಪ್ಪು ಕೋಣೆಯ ದುರಂತ ಎಂದು ಕರೆಯಲ್ಪಟ್ಟಿದೆ.*

ಭಾರತದ ಮೇಲೆ ಅಧಿಕಾರ ಸ್ಥಾಪಿಸಲು ಹೊರಟ ಎಲ್ಲಾ ಯುರೋಪಿಯನ್ನರನ್ನು ಸೋಲಿಸಿದ ಬ್ರಿಟಿಷರು ಭಾರತವನ್ನು ಆಕ್ರಮಿಸಲು ತೊಡಗಿದರು. ಈ ಆಕ್ರಮಣಕ್ಕೆ ಮೊದಲು ವಶವಾದದ್ದೇ ಬಂಗಾಳ. ನವಾಬ ಸಿರಾಜುದ್ದೌಲನು ಬಂಗಾಳದ ಮೇಲಿನ ಅಧಿಪತ್ಯವನ್ನು ಉಳಿಸಿಕೊಳ್ಳಲು ಬ್ರಿಟಿಷರೊಂದಿಗೆ ಕಾದಾಡಿದ ಯುದ್ಧವನ್ನು ಪ್ಲಾಸಿ ಕದನವೆಂದು ಕರೆಯುತ್ತಾರೆ. ಈ ಯುದ್ಧದಲ್ಲಿ ರಾಬರ್ಟ್‌ಕ್ಲೈವ್ ನೇತೃತ್ವದ ಕಂಪನಿ ಸೈನ್ಯವು ನವಾಬ ಸಿರಾಜುದ್ದೌಲನನ್ನು 1757ರಲ್ಲಿ ನಡೆದ ನಿರ್ಣಾಯಕ ಪ್ಲಾಸಿ ಕದನದಲ್ಲಿ ಸೋಲಿಸಿದನು. ಬ್ರಿಟಿಷರೊಂದಿಗೆ ಸಹಕರಿಸಿದ ಮೀರ್‌ಜಾಫರನನ್ನು ಬಂಗಾಳದ ನವಾಬನನ್ನಾಗಿ ನೇಮಿಸಿ ಪ್ರತಿಯಾಗಿ ಅವನಿಂದ ಬ್ರಿಟಿಷರು 24 ಪರಗಣದ ಮೇಲಿನ ಜಮೀನ್ದಾರಿ ಹಕ್ಕನ್ನು ಪಡೆದುಕೊಂಡು ಅತ್ಯಂತ ಪ್ರಬಲರಾದರು.

> **ನಿಮಗಿದು ತಿಳಿದಿರಲಿ :**
>
> ದಿವಾನಿ ಹಕ್ಕು ಎಂದರೆ ಭೂಕಂದಾಯ ವಸೂಲಿಮಾಡುವ ಹಕ್ಕು.

ಮೀರ್‌ಜಾಫರನು ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲು ಮುಂದಾದಾಗ ಬ್ರಿಟಿಷರು ಅವನನ್ನು ಅಧಿಕಾರದಿಂದ ಕೆಳಗಿಳಿಸಿ ಮೀರ್‌ಕಾಸಿಮನನ್ನು ನವಾಬನನ್ನಾಗಿ ಮಾಡಿದರು. ಇದಕ್ಕೆ ಪ್ರತಿಯಾಗಿ

ಅವನು ಬರ್ದವಾನ, ಮಿಡ್ನಾಪುರ ಮತ್ತು ಚಿತ್ತಗಾಂಗ್ ಪ್ರದೇಶಗಳನ್ನು ಬ್ರಿಟಿಷರಿಗೆ ಬಳುವಳಿಯಾಗಿ ನೀಡಿದನು. ಇಂಗ್ಲಿಷರ ಹಿಡಿತದಿಂದ ಹೊರಬರಲು ಮೀರ್‌ಖಾಸಿಮನು ಪ್ರಯತ್ನಿಸಿದಾಗ ಅವನನ್ನು ಪದಚ್ಯುತಿಗೊಳಿಸಿದರು. ನಂತರ ಷರತ್ತುಗಳೊಂದಿಗೆ ಇಂಗ್ಲಿಷರು ಮೀರ್‌ಜಾಫರನನ್ನು ಮತ್ತೆ ನವಾಬನನ್ನಾಗಿ ಮಾಡಿದರು.

ಇದರ ನಡುವೆ ಮೊಘಲ್ ಚಕ್ರವರ್ತಿ ಷಾ ಅಲಂ, ಔದ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್‌ಖಾಸಿಮರ ತ್ರಿಮೈತ್ರಿ ಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಇದನ್ನು 1764ರ ಬಕ್ಸಾರ್ ಕದನ ಎಂದು ಕರೆಯುತ್ತಾರೆ ಈ ಕದನದ ಪರಿಣಾಮವಾಗಿ ಬಿಹಾರ, ಒರಿಸ್ಸಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು. ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು. ಪರಿಣಾಮವಾಗಿ 1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್‌ಕ್ಲೈವನು ಬಂಗಾಳದಲ್ಲಿ ದ್ವಿ-ಸರ್ಕಾರವನ್ನು ಜಾರಿಗೆ ತಂದನು. ಅಂದರೆ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂಕಂದಾಯವನ್ನು ವಸೂಲಿ ಮಾಡುತ್ತಿದ್ದರು. ಆಡಳಿತ, ನ್ಯಾಯ ಪ್ರತಿಪಾದನೆ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನವಾಬನು ನಿರ್ವಹಿಸುತ್ತಿದ್ದನು. ಇದನ್ನೇ ದ್ವಿ-ಸರ್ಕಾರವೆಂದು ಕರೆಯಲಾಗಿದೆ.

ಹೀಗೆ ಬ್ರಿಟಿಷರು ತಮ್ಮ ವಾಣಿಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ತಮ್ಮ ರಾಜಕೀಯ ಕುಟಿಲತೆಯಿಂದ ದೇಶೀಯ ಪ್ರದೇಶಗಳ ಮೇಲೆ ಭದ್ರಹಿಡಿತವನ್ನು ಸಾಧಿಸಿರು. ಕ್ರಮೇಣ ಭಾರತದ ಪ್ರಧಾನ ಭೂಮಿಕೆಯಲ್ಲಿ ಕಾಣಿಸಿಕೊಂಡರು. ಈ ಮೂಲಕ ಭಾರತದ ಮೇಲೆ ಬ್ರಿಟಿಷರು ತಮ್ಮ ಅಧಿಪತ್ಯವನ್ನು ಸ್ಥಾಪಿಸಲು ಆರಂಭಿಸಿದರು.

**ನಿಮಗಿದು ತಿಳಿದಿರಲಿ :**

*1600ರಲ್ಲಿ* ಈಸ್ಟ್ ಇಂಡಿಯಾ ಕಂಪನಿಯನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಲಾಯಿತು.

*1602ರಲ್ಲಿ* ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ನೆದರ್‌ಲ್ಯಾಂಡ್‌ನಲ್ಲಿ ಸ್ಥಾಪಿಸಲಾಯಿತು.

*1619ರಲ್ಲಿ* ಮೊಘಲ್ ಚಕ್ರವರ್ತಿ ಜಹಂಗೀರನು ಈಸ್ಟ್ ಇಂಡಿಯಾ ಕಂಪನಿಗೆ ಪಶ್ಚಿಮ ಕರಾವಳಿಯ ಸೂರತ್ತಿನಲ್ಲಿ ಹಾಗೂ ಪೂರ್ವ ಕರಾವಳಿಯ ಹೂಗ್ಲಿಯಲ್ಲಿ ವ್ಯಾಪಾರ ಮಾಡಲು ಅನುಮತಿಯನ್ನು ನೀಡಿದನು.

*1639ರಲ್ಲಿ* ಇಂಗ್ಲಿಷರು ತಮ್ಮ ಮೊದಲ ಸರಕು ಕೋಠಿಯನ್ನು ಮದ್ರಾಸಿನಲ್ಲಿ ಸ್ಥಾಪಿಸಿದರು.

*1664ರಲ್ಲಿ* ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಫ್ರಾನ್ಸ್‌ನಲ್ಲಿ ಸ್ಥಾಪನೆಗೊಂಡಿತು.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.**

1. 17ನೆಯ ಶತಮಾನದ ಭಾರತದಲ್ಲಿ ಯುರೋಪಿನ ವ್ಯಾಪಾರವು __________ ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
2. ಮೊದಲನೆಯ ಕರ್ನಾಟಿಕ್ ಯುದ್ಧವು ಇಂಗ್ಲಿಷರು ಮತ್ತು __________ ರ ನಡುವೆ ನಡೆಯಿತು.

KTBS Not to be republished

3. ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ ________ .

4. ಪ್ಲಾಸಿಕದನದಲ್ಲಿ ಇಂಗ್ಲಿಷ್ ಸೇನೆಯ ನೇತೃತ್ವವಹಿಸಿದ್ದವನು ____________ .

5. ಬಂಗಾಳದಲ್ಲಿ ದ್ವಿ–ಸರ್ಕಾರವನ್ನು ಜಾರಿಗೆ ತಂದವನು ____________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

1. ಪ್ರಾರಂಭದಲ್ಲಿ ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು ?

2. "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ." ಈ ಹೇಳಿಕೆಯನ್ನು ಸಮರ್ಥಿಸಿ.

3. ಕರ್ನಾಟಿಕ್ ಯುದ್ಧಗಳು ಇಂಗ್ಲಿಷರು ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು ಎಂಬುದನ್ನು ವಿವರಿಸಿ.

4. ಪ್ಲಾಸಿಕದನದ ಫಲಿತಾಂಶಗಳೇನು ?

5. ದ್ವಿ–ಸರ್ಕಾರ ಪದ್ಧತಿಯನ್ನು ವಿವರಿಸಿ.

**III. ಯೋಜನೆ**

1. ವೈಜ್ಞಾನಿಕ ಬೆಳವಣಿಗೆಯು ಪ್ರಪಂಚದಲ್ಲಿ ಅನೇಕ ಬದಲಾವಣೆಗಳನ್ನು ತಂದಿದ್ದು, ಇವುಗಳ ಬಗ್ಗೆ ಮಿತ್ರರೊಂದಿಗೆ ಚರ್ಚಿಸಿ ವರದಿ ಸಿದ್ದಪಡಿಸಿ.

2. ಶಿಕ್ಷಕರ ನೆರವಿನಿಂದ ಅಂತರ್ಜಾಲದಲ್ಲಿ ಸಮುದ್ರ ಮಾರ್ಗಗಳ ಬಗ್ಗೆ ಮಾಹಿತಿ ತಿಳಿಯಿರಿ.

KTBS
Not to be republished